**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:57, ಸಿ.ವಿ.ರಾಮನ್‌ನಗರ**
**ವಾರ್ಡ್ ಸಮಿತಿ ಸಭೆ, ದಿನಾಂಕ: 06-04-2022 ರ ಸಭಾ ನಡವಳಿಗಳು**

ದಿನಾಂಕ: 06-04-2022 ರಂದು ಬೆಳಗ್ಗೆ 10.00 ಗಂಟೆಗೆ ವಾರ್ಡ್-57 ಸಿ.ವಿ.ರಾಮನ್‌ನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ಸಹಾಯಕ ಕೇಂದ್ರ, ಕಗ್ಗದಾಸಪುರ (ಬೈರಸಂದ್ರ), ಸಿ.ವಿ.ರಾಮನ್‌ನಗರ ಇಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಗಳು.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು**

| ಕ್ರಮ ಸಂ | ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು | ಪ್ರವರ್ಗ |
|---|---|---|
| 1 | ಶ್ರೀ ಶ್ರೀಕಾಂತ್ ಎಂ ವೈ | ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿರವರು |
| 2 | ಶ್ರೀಮತಿ.ಶಾಂತಾ ಬಾಡಗಂಡಿ | ಕಾರ್ಯದರ್ಶಿ |
| 3 | ಶ್ರೀಮತಿ. ವೆಂಕಟಲಕ್ಷ್ಮಿ | ಸದಸ್ಯರು |
| 4 | ಶ್ರೀ. ಅನಿಲ್‌ಕುಮಾರ್ | ಸದಸ್ಯರು |
| 5 | ಶ್ರೀಮತಿ.ಸುರೇಖ | ಸದಸ್ಯರು |
| 6 | ಶ್ರೀ.ಮುನಿರಾಜು | ಸದಸ್ಯರು |

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಸಿಬ್ಬಂಧಿಗಳು

1) ಶ್ರೀಮತಿ.ಮೀನಾಕ್ಷಿ, ಹಿರಿಯ ಆರೋಗ್ಯ ಪರಿವೀಕ್ಷಕರು
2) ಶ್ರೀ. ಕೊಂಡಯ್ಯ, ಕಿರಿಯ ಆರೋಗ್ಯ ಪರಿವೀಕ್ಷಕರು
3) ಕುಮಾರಿ.ಸಹನ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
4) ಶ್ರೀ.ಕುಮಾರ್ ನಾಯಕ್, ಸಹಾಯಕ ಅಭಿಯಂತರರು, ಬೆಸ್ಕಾಂ
5) ಶ್ರೀಮತಿ.ರೂಪ, ಸಮಾಜ ಕಲ್ಯಾಣ ಇಲಾಖೆ
6) ಶ್ರೀ.ಶ್ರೀನಿವಾಸ್, ಕಂದಾಯ ವಸೂಲಿಗಾರರು
7) ಶ್ರೀ.ಯೋಗರಾಜ್ ಕಿರಿಯ ಅಭಿಯಂತರರು, ಬೆಸ್ಕಾಂ

ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳನ್ನು ಕಮಿಟಿಯ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವುದಕ್ಕೆ ಸ್ವಾಗತ ಕೋರಿದರು. ಸಭೆಯನ್ನು ಮುಂದುವರೆಸಲು ಸೂಚನೆ ನೀಡಿದ ನಂತರ, ಸಭೆಯನ್ನು ಆರಂಭಿಸಲಾಯಿತು.

**ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ | ಕೈಗೊಂಡ ಕ್ರಮ |
|---|---|---|---|
| | **ಘನತ್ಯಾಜ್ಯ ನಿರ್ವಹಣೆ (SWM)-BBMP** | | |
| 1 | ಕಸ ಸಂಗ್ರಹಣೆ ವಾಹನಗಳಿಗೆ ಮೈಕ್‌ನ್ನು ಅಳವಡಿಸಲು ಸೂಚಿಸಲಾಯಿತು. | Junior Health Inspector | Pending |

Scanned with CamScanner

| | | | |
|---|---|---|---|
| 2 | ಪ್ರಸ್ತುತ ಪೌರಕಾರ್ಮಿಕರು ಸುದ್ದಗುಂಟೆ ಪಾಳ್ಯದಿಂದ ಬಯೋ ಮೆಟ್ರಿಕ್ **Thumb** ನೀಡಲು ಭುವನೇಶ್ವರಿನಗರ ಪಾರ್ಕ್ ಹತ್ತಿರ ಬೆಳಗ್ಗೆ, ಮಧ್ಯಾಹ್ನ ಬರಬೇಕಾಗಿದ್ದು, ಸುದ್ದಗುಂಟೆ ಪಾಳ್ಯದಲ್ಲಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರಿಗೆ ಸುದ್ದಗುಂಟೆ ಪಾಳ್ಯದಲ್ಲಿ ಬಯೋ ಮೆಟ್ರಿಕ್ **Thumb** ವ್ಯವಸ್ಥೆ ಮಾಡಲು ಕೋರಲಾಯಿತು. | ಕಿರಿಯ ಆರೋಗ್ಯ ಪರಿವೀಕ್ಷಕರು | **Pending** |
| | **ಆರೋಗ್ಯ ಇಲಾಖೆ (HEALTH DPTD)-BBMP** | | |
| 1 | ವರ್ಸೋವಾ ಲೇಔಟ್ ಹಿಂಬದಿಯಲ್ಲಿರುವ ಖಾಲಿ ಜಾಗದಲ್ಲಿ ಅನಧಿಕೃತ ಉದ್ದಿಮೆಗಳು ನಡೆಸುತ್ತಿದ್ದು, ಇದರಿಂದ ಶಬ್ಧ ಮಾಲಿನ್ಯ ಉಂಟಾಗುತ್ತಿದೆ ಹಾಗೂ ಕಾರ್ಮಿಕರ ಶೆಡ್‌ಗಳದ್ದು, ಸ್ವಚ್ಚತೆ ಕಾಪಾಡದೇ ತೊಂದರೆ ಉಂಟಾಗುತ್ತಿದೆ ಎಂದು ತಿಳಸಲಾಯಿತು. ಸದರಿ ಸ್ಥಳದ ಪರಿವೀಕ್ಷಣೆ ಮಾಡಲಾಯಿತು. | **ಹಿರಿಯ ಆರೋಗ್ಯ ಪರಿವೀಕ್ಷಕರು** | ಸ್ಥಳದ ಪರಿವೀಕ್ಷಣೆ ಮಾಡಲಾಯಿತು |
| | **ಕಾಮಗಾರಿ ಇಲಾಖೆ (Engineering)-BBMP** | | |
| 1 | ಹಳೆ ಮದ್ರಾಸ್ ರಸ್ತೆಯ ಹಾಗೂ ಕಗ್ಗದಾಸಪುರ ಮುಖ್ಯರಸ್ತೆಯ ಫುಟ್‌ಪಾತ್ ಒತ್ತುವರಿಗಳನ್ನು ತೆರವುಗೊಳಸಲು ಕೋರಲಾಯಿತು. | **Assistant Engineer- BBMP** | **Pending** |
| 2 | ವರ್ತೂರು ರಸ್ತೆಯಲ್ಲಿ **Sign board** ಅಳವಡಿಸಲು ಕೋರಲಾಯಿತು. | **Assistant Engineer-BWSSB** | **Completed** |
| | **ತೋಟಗಾರಿಕಾ ಇಲಾಖೆ (Horticulture)-BBMP** | | |
| 1 | ಭುವನೇಶ್ವರಿನಗರದಲ್ಲಿರುವ ಪಾರ್ಕ್ ಹತ್ತಿರವಿರುವ ಬೋರ್‌ವೆಲ್‌ನ್ನು ದುರಸ್ಥಿಗೊಳಸಲು ಕೋರಲಾಯಿತು ಹಾಗೂ ಸದರಿ ಪಾರ್ಕ್‌ನಲ್ಲಿರುವ **gym & children play equipment**ಗಳು ಹಾಳಾಗಿದ್ದು, ಅವುಗಳನ್ನು ಸರಿಪಡಿಸಿಕೊಡಲು ಕೋರಲಾಯಿತು. | **Horticulture** | **Pending** |
| | **ಬೀದಿ ದೀಪಗಳ ನಿರ್ವಹಣೆ (Street lights)-BBMP** | | |
| 1 | ಬೀದಿ ದೀಪಗಳ ಕಂಬಗಳಗೆ "Automatic control" ಗಳನ್ನು ಅಳವಡಿಸಲು ಕೋರಲಾಯಿತು. | **Assistant Engineer-Street light** | **Pending** |
| 2 | ಅಟಲ್ ಬಿಹಾರಿ ವಾಜಪೇಯಿ ವಾಕಿಂಗ್ ಟ್ರಾಕ್‌ಲ್ಲಿ ಬೀದಿ ದೀಪಗಳು ಉರಿಯುತ್ತಿಲ್ಲವೆಂದು ದೂರಲಾಯಿತು. | **Assistant Engineer-Street light** | **Pending** |
| 3 | ಹಳೇ ಮದ್ರಾಸ್ ರಸ್ತೆ ಹಾಗೂ ವರ್ತೂರು ರಸ್ತೆಯ ಜಂಕ್ಷನ್‌ನಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ **High mast** ನ್ನು ಅಳವಡಿಸಲು ಕೋರಲಾಯಿತು. | **Assistant Engineer-Street light** | **TRAFIC POLICE** ಇಲಾಖೆಯಿಂದ ಮನವಿ ಸಲ್ಲಿಸಿದ್ದು, ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. 30.08.2021 |
| 4 | ವರ್ಸೋವಾ ಬಡಾವಣೆಯಲ್ಲಿ 6 ಹೊಸ ಬೀದಿ ದೀಪಗಳ ಕಂಬ ಹಾಗೂ ಉಪಕರಣಗಳನ್ನು ಅಳವಡಿಸಲು ಕೋರಲಾಯಿತು. | **Assistant Engineer-Street light** | **Pending** |
| 5 | ವರ್ಸೋವಾ ಬಡಾವಣೆಯಲ್ಲಿ ಬೀದಿ ದೀಪಗಳ ಕಂಬಗಳಗೆ ಸ್ವಿಚ್ ಬಾಕ್ಸ್‌ಗಳನ್ನು ಅಳವಡಿಸಲು ಕೋರಲಾಯಿತು. | **Assistant Engineer-Street light** | **Pending** |
| 6 | ಹಳೇ ಮದ್ರಾಸ್ ರಸ್ತೆಯಲ್ಲಿ ಎಲ್.ಇ.ಡಿ ಲೈಟ್‌ಗಳು | **Assistant** | **Pending** |

Scanned with CamScanner

| | | | |
|---|---|---|---|
| | ಉರಿಯುತ್ತಿಲ್ಲವಾದ್ದರಿಂದ ತುಂಬಾ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸಲು ಸೂಚಿಸಲಾಯಿತು. | Engineer-Street light | |
| 7 | ಸುದ್ದಗುಂಟೆ ಪಾಳ್ಯ ರಸ್ತೆಯಲ್ಲಿ ಬೀದಿದೀಪಗಳು ಉರಿಯುತ್ತಿಲ್ಲವಾದ್ದರಿಂದ ತುಂಬಾ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸಲು ಸೂಚಿಸಲಾಯಿತು. | Assistant Engineer-Street light | Pending |
| | **ಕಂದಾಯ ಇಲಾಖೆ (Revinue Department)-BBMP** | | |
| 1 | ಘನತ್ಯಾಜ್ಯ ನಿರ್ವಹಣೆಯ ವಾಹನಗಳ Transit Pointಗಾಗಿ ಸ್ಥಳ ನಿಗಧಿಪಡಿಸಲು ಸೂಚಿಸಲಾಯಿತು. | Revinue Inspector | ಬಿಡಿಎ ಆಯುಕ್ತರಿಗೆ ಬೈರಸಂದ್ರ ಗ್ರಾಮದ ಸರ್ವೆ ನಂ.144 ರ ಸ್ಥಳದ ವಿವರಣೆ ಕೋರಿ ಪತ್ರ ಬರೆಯಲಾಗಿರುತ್ತದೆ. |
| 2 | ಬಾಲಾಜಿ ಬಡಾವಣೆಯಲ್ಲಿರುವ 29ನೇ ಅಡ್ಡರಸ್ತೆಯಲ್ಲಿರುವ ದೊಡ್ಡ ಖಾಲಿ ನಿವೇಶನದಲ್ಲಿ ಗಿಡ ಗಂಟಿಗಳು ಬೆಳದುಕೊಂಡು ಹಾಗೂ ಸಾರ್ವಜನಿಕರು ಕಸ ಹಾಕುತ್ತಿದ್ದು, ಅಲ್ಲಿನ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ಸದರಿ ನಿವೇಶನದ ಮಾಲೀಕರನ್ನು ಗುರುತಿಸಿ ಅವರ ವಿಳಾಸವನ್ನು ಕೊಟ್ಟಿದಲ್ಲಿ ಕ್ರಮ ಕೈಗೊಳ್ಳಲಾಗುವುದು. | Revinue Inspector | Pending |
| 3 | ನಾಗವಾರ ಪಾಳ್ಯದಲ್ಲಿ ಇರುವ ಖಾಲಿ ನಿವೇಶನದಲ್ಲಿ ಶೆಡ್‌ಗಳನ್ನು ನಿರ್ಮಿಸಿ ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸದೇ ಇರುವುದರಿಂದ ತುಂಬಾ ತೊಂದರೆಯಾಗುತ್ತಿದ್ದು, ಸದರಿ ನಿವೇಶನದ ಮಾಲೀಕರ ವಿವರಗಳನ್ನು ನೀಡಲು ಸೂಚಿಸಲಾಯಿತು. | Revinue Inspector | Pending |
| | **Animal Husbandary** | | |
| 1 | ನಾಗವಾರಪಾಳ್ಯದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಇದರ ಬಗ್ಗೆ ಕ್ರಮ ವಹಿಸಲು ಕೋರಲಾಯಿತು. | Animal Husbandary department | ಕ್ರಮ ವಹಿಸಲಾಗುತ್ತಿದೆ |
| | **Road Infra-BBMP** | | |
| 1 | ಮಲ್ಲೇಶ್‌ಪಾಳ್ಯ ಹಾಗೂ ಕಗ್ಗದಾಸಪುರ ಮುಖ್ಯರಸ್ತೆಗಳಲ್ಲಿ ಹಲವು ಕಡೆ Slab ಗಳು ಮುರಿದು ಹೋಗಿದ್ದು, ಇವುಗಳನ್ನು ಬದಲಾಯಿಸಿ ಕೊಡಲು ಕೋರಲಾಯಿತು. | Assistant Engineer- Road Infra | Pending |
| 2 | ಹಳೇ ಮದ್ರಾಸ್ ರಸ್ತೆ, ಗೋಪಾಲನ್ ಮಾಲ್ ಎದುರು ಮೀಡಿಯನ್‌ಗಳನ್ನು ಅಳವಡಿಸಿದ್ದು, ಸರಿಯಾಗಿ ಫಿಕ್ಸ್ ಮಾಡದೇ ಇರುವ ಕಾರಣ ರಸ್ತೆ ಸಂಚಾರಕ್ಕೆ ಅಡ್ಡಿಯುಂಟಾಗುತ್ತಿದ್ದು, ಇದನ್ನು ಸರಿಪಡಿಸಿಕೊಡಲು ಟ್ರಾಫಿಕ್ ಪೋಲೀಸ್ ಸಿಬ್ಬಂಧಿಗಳು ತಿಳಿಸಿದರು. | Assistant Engineer- Road Infra | Pending |
| 3 | ಕಗ್ಗದಾಸಪುರ ಮುಖ್ಯರಸ್ತೆಯಲ್ಲಿ M.K.Retail ಅಂಗಡಿಯಿಂದ 1ನೇ ಅಡ್ಡರಸ್ತೆ ಕಗ್ಗದಾಸಪುರ ರವರೆಗೆ ಒಂದು ಬದಿ ಮಳೆ ನೀರಿನ ಚರಂಡಿ ಇಲ್ಲದಿರುವುದರಿಂದ ಮಳೆಯಿಂದಾಗಿ ತುಂಬಾ ತೊಂದರೆಯಾಗುತ್ತಿದ್ದು, ಇದನ್ನು ನಿರ್ಮಿಸಲು ಕ್ರಮ ಕೈಗೊಳ್ಳಲು ಕೋರಲಾಯಿತು. | Assistant Engineer- Road Infra | ಮುಖ್ಯ ಅಭಿಯಂತರರು(ರಸ್ತೆ ಮೂಲಭೂತ ಸೌಕರ್ಯ) ರವರಿಗೆ ಪತ್ರ ಬರೆಯಲಾಗಿದೆ. |
| 4 | ಹಳೆ ಮದ್ರಾಸ್ ರಸ್ತೆಯಲ್ಲಿನ ಚರಂಡಿಯ Shoulder drain ಯಲ್ಲಿನ ಹೂಳನ್ನು ತೆರವುಗೊಳಿಸಲು ಕೋರಲಾಯಿತು ಹಾಗೂ ರಸ್ತೆಯಲ್ಲಿ Shoulder drain ಹತ್ತಿರ ಮಳೆನೀರು ನಿಲ್ಲದಂತೆ ಕ್ರಮವಹಿಸಲು ಕೋರಲಾಯಿತು. | Assistant Engineer- Road Infra | Pending |
| | **ಕಲ್ಯಾಣ ಇಲಾಖೆ (Welfare Department)-BBMP** | | |
| 5 | ಅರ್ಹ ಫಲಾನುಭವಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಕಡತವನ್ನು ಸಲ್ಲಿಸಲಾಗಿದ್ದು, ಇದುವರೆವಿಗೂ | Welfare Department | Pending |

Scanned with CamScanner

| | | | |
|---|---|---|---|
| | ವಿತರಣೆಯಾಗಿರುವುದಿಲ್ಲ. ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | | |
| | **ಬೃಹತ್ ನೀರುಗಾಲುವೆ (SWD)-BBMP** | | |
| 1 | ಮಲ್ಲೇಶ್‌ಪಾಳ್ಯ 5ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆಯಲ್ಲಿರುವ ಬೃಹತ್ ನೀರುಗಾಲುವೆಯಲ್ಲಿ ಹೂಳನ್ನು ತೆರವುಗೊಳಿಸಲು ಕೋರಲಾಯಿತು. | Assistant Engineer- SWD | Pending |
| 2 | ನಾಗವಾರ ಪಾಳ್ಯದಲ್ಲಿರುವ ಬೃಹತ್ ನೀರುಗಾಲುವೆಗೆ Meshನ್ನು ಅಳವಡಿಸುವಬಗೆ ಕೋರಲಾಯಿತು. | SWD | Pending |
| 3 | ವರ್ಸೋವಾ ಬಡಾವಣೆ ಹತ್ತಿರವಿರುವ ಬೃಹತ್ ನೀರುಗಾಲುವೆ ಹೂಳೆತ್ತಲು ಅನೇಕ ಬಾರಿ ಕೋರಿದರೂ ಕ್ರಮ ವಹಿಸಿರುವುದಿಲ್ಲವೆಂದು ತಿಳಿಸಲಾಗಿದ್ದು, ಇದರ ಬಗ್ಗೆ ಕ್ರಮ ವಹಿಸಲು ಕೋರಲಾಯಿತು. | SWD | Pending |
| 4 | ಕಗ್ಗದಾಸಪುರ ಮುಖ್ಯರಸ್ತೆಯಲ್ಲಿರುವ ಭುವನೇಶ್ವರಿನಗರದ ಹತ್ತಿರ ಡಿಆರ್‌ಡಿಒ ಇಂದ ಭೈರಸಂದ್ರ ಮುಖ್ಯರಸ್ತೆಯವರೆಗೆ ಬೃಹತ್ ನೀರುಗಾಲುವೆ ಕಾಮಗಾರಿ ಕೈಗೊಳ್ಳುತ್ತಿದ್ದು, ಡೆಬ್ರಿಸ್‌ನ್ನು ತೆರೆವುಗೊಳಿಸಲು ಕೋರಲಾಯಿತು. | Assistant Engineer Storm Water Drain | Completed |
| | **Trafic Engineering cell-BBMP** | | |
| 1 | ಹಳೇಮದ್ರಾಸ್ ರಸ್ತೆಯಲ್ಲಿ ಗೋಪಾಲನ್ ಮಾಲ್ ಹತ್ತಿರ ದಿಂದ ಎನ್.ಜಿ.ಇ.ಎಫ್ ಸಿಗ್ನಲ್‌ರವರೆಗೂ ಅಳವಡಿಸಿರುವ ಮೀಡಿಯನ್‌ಗಳನ್ನು Fix ಮಾಡದೇ ಇರುವ ಕಾರಣ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಿದರು. | AEE Trafic Engineering cell | Pending |
| 2 | ಬೆನ್ನಿಗಾನಹಳ್ಳಿ ಸ್ಕೈ ವಾಕ್ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಿಕೊಡಲು ಕೋರಲಾಯಿತು. | AEE Trafic Engineering cell | Pending |
| | **II.BWSSB** | | |
| 1 | ಸುದ್ದಗುಂಟೆ ಪಾಳ್ಯದ ಮಹೇಶ್ವರಮ್ಮ ದೇವಸ್ಥಾನದ ಹತ್ತಿರ ಇರುವ ಬೋರ್‌ವೆಲ್‌ನ ಮೋಟರ್ ದುರಸ್ಥಿಗೊಳಿಸಿ ನೀರು ಬಳಕೆಯಾಗುವಂತೆ ಕ್ರಮ ವಹಿಸಲು ಕೋರಲಾಯಿತು. | Assistant Engineer BWSSB | Pending |
| 2 | ವರ್ತೂರು ಮುಖ್ಯರಸ್ತೆಯಲ್ಲಿರುವ ಒಳಚರಂಡಿಯ ಮ್ಯಾನ್‌ಹೋಲ್ ಮತ್ತು ಪೈಪ್‌ಗಳು ತುಂಬಾ ಹಳೆಯದಾಗಿದ್ದು, ಹಾಳಾಗಿರುತ್ತದೆ ಇದನ್ನು ಬದಲಾಯಿಸಿಕೊಡಲು ಕೋರಲಾಯಿತು. | Assistant Engineer-BWSSB | Work yet to be start |
| 3 | ರಹತ್‌ಬಾಗ್ ಬಡಾವಣೆಯಲ್ಲಿ ಸುಮಾರು 17 ಅಪಾರ್ಟ್‌ಮೆಂಟ್ ಹಾಗೂ 15 ಒಂಟಿಮನೆಗಳಿದ್ದು, ಇವುಗಳಿಗೆ ಒಳಚರಂಡಿಯ ಸಂಪರ್ಕ ನೀಡಿರುವುದಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | Assistant Engineer-BWSSB | ಬಡಾವಣೆಯಲ್ಲಿ ಒಳಚರಂಡಿ ಸಂಪರ್ಕ ಇರುತ್ತದೆ. ಅದಕ್ಕೆ ಸಂಪರ್ಕ ಕಲ್ಪಿಸುವುದು ಮನೆಯವರ ಜವಾಬ್ದಾರಿಯಾಗಿರುತ್ತದೆ. |
| 4 | ನಾಗವಾರ ಪಾಳ್ಯದಲ್ಲಿ ಒಳಚರಂಡಿ ನೀರು ಕುಡಿಯುವ ನೀರಿನ ಜೊತೆ ಮಿಶ್ರಿತಗೊಂಡು ಸರಬರಾಜು ಆಗುತ್ತಿದ್ದು, ಇದರ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಕೋರಲಾಯಿತು. | Assistant Engineer | ಸದರಿ ಭಾಗದಲ್ಲಿ ಹೊಸ ಪೈಪ್‌ಲೈನ್ ಕಾಮಗಾರಿಗೆ ಈಗಾಗಲೇ ಅಂದಾಜು ಪಟ್ಟಿಯನ್ನು ಅನುಮೋದನೆಗೆ |

Scanned with CamScanner

| | | | |
|---|---|---|---|
| | | | ಸಲ್ಲಿಸಲಾಗಿರುತ್ತದೆ. Work yet to be start |
| 5 | ಬಾಲಾಜಿ ಬಡಾವಣೆಯಲ್ಲಿ ಸರಬರಾಜು ಮಾಡುವ ಕುಡಿಯುವ ನೀರು Contaminated ಆಗುತ್ತಿದ್ದು, 30 ದಿನಗಳಿಂದ ಕುಡಿಯುವ ನೀರು ಸರಬರಾಜಾಗದೇ ತುಂಬಾ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸಲು ತಿಳಿಸಲಾಯಿತು. | Assistant Engineer-BWSSB | Work done |
| 6 | ಬಾಲಾಜಿ ಬಡಾವಣೆಯ ಒಳಚರಂಡಿಯ ಮ್ಯಾನ್‌ಹೋಲ್‌ಗಳಲ್ಲಿ ಹೂಳು ತುಂಬಿದ್ದು, ಹೂಳನ್ನು ತೆರವುಗೊಳಿಸುವಂತೆ ತಿಳಿಸಲಾಯಿತು. | Assistant Engineer-BWSSB | Work done |
| 7 | ಭುವನೇಶ್ವರಿನಗರದಲ್ಲಿರುವ ನೀರಿನ ಟ್ಯಾಂಕ್ ಶಿಥಿಲಗೊಂಡಿದ್ದು, ಕೂಡಲೇ ಇದರ ಬಗ್ಗೆ ಕ್ರಮ ವಹಿಸಲು ಕೋರಲಾಯಿತು. | Assistant Engineer BWSSB | Pending |
| 8 | 6ನೇ ಅಡ್ಡರಸ್ತೆ ಕಗ್ಗದಾಸಪುರ ಟಾಪಿಂಗ್ ಟೌನ್ ಹತ್ತಿರ ಬಿಡಬ್ಲ್ಯೂಎಸ್‌ಎಸ್‌ಬಿ ಹತ್ತಿರ ಕಾಲುವೆಯ ಸ್ವಚ್ಛತಾ ಕಾರ್ಯ ನಿರ್ವಹಿಸಲಾಗುತ್ತಿದ್ದು, ಇದರಿಂದಾಗಿ ಪಕ್ಕದಲ್ಲಿರುವ ಆಸ್ತಿಗಳಿಗೆ ಹಾನಿ ಉಂಟಾಗುತ್ತಿದ್ದು, ಇದರ ಬಗ್ಗೆ ಕ್ರಮ ವಹಿಸಲು ಕೋರಲಾಯಿತು. | Assistant Engineer-BWSSB | 06.05.2022 |
| | **BESCOM** | | |
| 1 | ರಹತ್‌ಬಾಗ್ ರಸ್ತೆಗಳಲ್ಲಿ ಹಾಗೂ ವರ್ತೂರು ಮುಖ್ಯರಸ್ತೆಗಳಲ್ಲಿ ಮತ್ತು ಕಗ್ಗದಾಸಪುರ ಮುಖ್ಯ ರಸ್ತೆಗಳಲ್ಲಿ ಬೆಸ್ಕಾಂ ವತಿಯಿಂದ ಭೂಗತ ಕೇಬಲ್ ಅಳವಡಿಕೆ ಕಾಮಗಾರಿಗೆ ರಸ್ತೆಗಳನ್ನು ಅಗೆಯಲಾಗಿದ್ದು, ತುರ್ತಾಗಿ ರಸ್ತೆ ದುರಸ್ಥಿ ಕಾಮಗಾರಿ ಕೈಗೊಳ್ಳಲು ಕೋರಲಾಯಿತು. | Assistant Engineer Bescom | Pending |
| 2 | ವರ್ತೂರು ಮುಖ್ಯರಸ್ತೆಯಲ್ಲಿ ಕೇಬಲ್ ಅಳವಡಿಕೆಗಾಗಿ ಅಗೆದಿರುವ ರಸ್ತೆಯನ್ನು ದುರಸ್ಥಿಪಡಿಸಲು ಕೋರಲಾಯಿತು. | Assistant Engineer-BESCOM | Pending |
| 3 | ಕಗ್ಗದಾಸಪುರ ಮುಖ್ಯರಸ್ತೆಯಲ್ಲಿ ಹಾಗೂ ಬಾಲಾಜಿ ಬಡಾವಣೆಯಲ್ಲಿ ಕೇಬಲ್ ಅಳವಡಿಕೆಗಾಗಿ ಅಗೆದಿರುವ ರಸ್ತೆಯನ್ನು ದುರಸ್ಥಿಪಡಿಸಲು ಕೋರಲಾಯಿತು. | Assistant Engineer-BESCOM | Pending |
| 4 | ಕಗ್ಗದಾಸಪುರ ಮುಖ್ಯರಸ್ತೆ, ಹಾಗೂ ಮಲ್ಲೇಶ್‌ಪಾಳ್ಯ ರಸ್ತೆಗಳಲ್ಲಿ, ಬೆಸ್ಕಾಂ ವತಿಯಿಂದ ಭೂಗತ ಕೇಬಲ್ ಅಳವಡಿಕೆ ಕಾಮಗಾರಿಗೆ ರಸ್ತೆಗಳನ್ನು ಅಗೆಯಲಾಗಿದ್ದು, ತುರ್ತಾಗಿ ರಸ್ತೆ ದುರಸ್ಥಿ ಕಾಮಗಾರಿ ಕೈಗೊಳ್ಳಲು ಕೋರಲಾಯಿತು ಹಾಗೂ RMU ಯೂನಿಟ್‌ಗಳನ್ನು ತುರ್ತಾಗಿ ಅಳವಡಿಸಲು ಕೋರಲಾಯಿತು. | Assistant Engineer-BESCOM | Pending |
| 5 | ಕಗ್ಗದಾಸಪುರ ಮುಖ್ಯರಸ್ತೆಯಲ್ಲಿರುವ ಪೂರ್ವ ಸಿಸನ್ ಅಪಾರ್ಟಮೆಂಟ್ ಮುಂದೆ ಇರುವ ಟ್ರಾನ್ಸ್‌ಫಾರ್ಮರ್ ನಲ್ಲಿ ಗಿಗಂಡಿಗಳು ಬೆಳೆದಿದ್ದು, ಇದರಿಂದ ತೊಂದರೆಯಾಗುತ್ತಿದ್ದು ಕೂಡಲೇ ಕ್ರಮ ವಹಿಸಲು ಕೋರಲಾಯಿತು. | Assistant Engineer Bescom | Pending |
| 6 | ವರ್ತೂರು ರಸ್ತೆಯಲ್ಲಿ ರಸ್ತೆಯಲ್ಲಿರುವ ಸಲಾರಿಯಾ ಅಪಾರ್ಟ್‌ಮೆಂಟ್ ಹತ್ತಿರ ನಿರುಪಯುಕ್ತ ಬೀದಿ ದೀಪಗಳ ಕಂಬಗಳನ್ನು ಶೇಖರಿಸಿದ್ದು, ಇದರಿಂದ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದ್ದು, ಇದನ್ನು ತೆರವುಗೊಳಿಸಲು ಕೋರಲಾಯಿತು. | Assistant Engineer-BESCOM | |
| 7 | 6ನೇ ಅಡ್ಡರಸ್ತೆ ಕಗ್ಗದಾಸಪುರ ಹಾಗೂ ಬಾಲಾಜಿ ಬಡಾವಣೆಯಲ್ಲಿ ರಸ್ತೆ ದುರಸ್ಥಿ ಕಾಮಗಾರಿ ಶೀಘ್ರ ಕೈಗೊಳ್ಳಲು ಕೋರಲಾಯಿತು. | Assistant Engineer-BESCOM | |
| 8 | ಸುದ್ದಗುಂಟೆ ಪಾಳ್ಯದ ರಸ್ತೆಗಳಲ್ಲಿ ರಸ್ತೆ ದುರಸ್ಥಿ ಕಾಮಗಾರಿ ಶೀಘ್ರ ಕೈಗೊಳ್ಳಲು ಕೋರಲಾಯಿತು. | Assistant Engineer-BESCOM | |
| | **ಸಂಚಾರಿ ಪೋಲೀಸ್ ಇಲಾಖೆ(Traffic police deparment)** | | |

Scanned with CamScanner

| | | | |
|---|---|---|---|
| 1 | ನಾಗವಾರ ಪಾಳ್ಯ ಮುಖ್ಯರಸ್ತೆಯಲ್ಲಿ ತುಂಬಾ ಸಂಚಾರ ದಟ್ಟಣೆಯಾಗುತ್ತಿದ್ದು, ಸಮ-ಬೆಸ ದಿನಾಂಕಗಳಲ್ಲಿ ಒಂದು ಬದಿಯಲ್ಲಿ ಪಾರ್ಕಿಂಗ್ ಮಾಡುವ ವ್ಯವಸ್ಥೆಯನ್ನು ತರುವ ಬಗ್ಗೆ ಖಚಿತಪಡಿಸಲು ಕೋರಲಾಯಿತು. | Traffic police | ರಸ್ತೆ ಕಿರಿದಾಗಿದ್ದು, ಒಂದು ಬದಿಯಲ್ಲಿ ಪಾರ್ಕಿಂಗ್ ಮಾಡುವ ವ್ಯವಸ್ಥೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸಲಾಯಿತು. |
| 2 | 19ನೇ ಅಡ್ಡರಸ್ತೆ ಕಗ್ಗದಾಸಪುರರಲ್ವೈ ಕ್ರಾಸಿಂಗ್ ಹತ್ತಿರ ಸಂಚಾರ ದಟ್ಟಣೆಯಾಗುತಿದ್ದು, ರಸ್ತೆ ಮಾರ್ಕಿಂಗ್ ಮಾಡಿಕೊಡಲು ಕೋರಲಾಯಿತು. | Traffic police/BBMP | |

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | **ಆರೋಗ್ಯ ಇಲಾಖೆ (HEALTH DPTD)-BBMP** | |
| 1 | 10ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, ಮಾರುತೀನಗರದಲ್ಲಿ Fogging ಮಾಡಲು ಕೋರಲಾಯಿತು. | ಹಿರಿಯ ಆರೋಗ್ಯ ಪರಿವೀಕ್ಷಕರು |
| | **Road Infra-BBMP** | |
| 1 | ನಾಗವಾರ ಪಾಳ್ಯ ಮುಖ್ಯರಸ್ತೆಯಲ್ಲಿರುವ ಫುಟ್‌ಪಾತ್‌ಗಳನ್ನು ಸರಿಪಡಿಸಲು ಕೋರಲಾಯಿತು. | Assistant Engineer-Road Infra |
| 2 | ಕಗ್ಗದಾಸಪುರ ಮುಖ್ಯರಸ್ತೆ, 29ನೇ ಅಡ್ಡರಸ್ತೆಯ ಹತ್ತಿರ ಓ.ಎಫ್.ಸಿ ಕೇಬಲ್ ಮ್ಯಾನ್‌ಹೋಲ್ ಮುಚ್ಚಳ ಸರಿಯಾಗಿ ಅಳವಡಿಸದ ಕಾರಣ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು, ಇದರ ಬಗ್ಗೆ ಕ್ರಮವಹಿಸಲು ಕೋರಲಾಯಿತು. | Assistant Engineer-Road Infra |
| | **ಬೃಹತ್ ನೀರುಗಾಲುವೆ (SWD)-BBMP** | |
| 1 | ಭುವನೇಶ್ವರಿನಗರ Entrance ನಲ್ಲಿ ಬೃಹತ್ ನೀರುಗಾಲುವೆ ವತಿಯಿಂದ ನಿರ್ಮಿಸುತ್ತಿರುವ ಬೃಹತ್ ನೀರುಗಾಲುವೆ ಕಾಮಗಾರಿಯನ್ನು ತುರ್ತಾಗಿ ಕೈಗೊಂಡು ಪೂರ್ಣಗೊಳಿಸಬೇಕೆಂದು ಕೋರಲಾಯಿತು. | Assistant Engineer-SWD |
| | ನಾಗವಾರಪಾಳ್ಯ ಮುಖ್ಯರಸ್ತೆಯಲ್ಲಿರುವ ಬೃಹತ್ ನೀರುಗಾಲುವೆ ಗೆ ತಂತಿ ಬೇಲಿ ಅಳವಡಿಸಲು ಕೋರಲಾಯಿತು. | Assistant Engineer-SWD |
| | **BESCOM** | |
| 1 | 19 ನೇ ಅಡ್ಡರಸ್ತೆ ಹಾಗೂ 6ನೇ ಬಿ ಅಡ್ಡರಸ್ತೆ ಕಗ್ಗದಾಸಪುರ ಇಲ್ಲಿ Restoration ಕಾಮಗಾರಿಯನ್ನು ಶೀಘ್ರವಾಗಿ ಕೈಗೊಂಡು ಪೂರ್ಣಗೊಳಿಸಲು ಕೋರಲಾಯಿತು. | Assistant Engineer-BESCOM |
| 2 | ನಾಗವಾರಪಾಳ್ಯದ 8ನೇ ಅಡ್ಡರಸ್ತೆಯಲ್ಲಿರುವ 3 ಅನುಪಯುಕ್ತ ಕಂಬಗಳನ್ನು ತೆರವುಗೊಳಿಸಲು ಕೋರಲಾಯಿತು. | Assistant Engineer-BESCOM |
| | **BWSSB** | |
| 1 | 10ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, ಮಾರುತೀನಗರದಲ್ಲಿ ಒಳಚರಂಡಿಯ ಛೇಂಬರ್‌ಗಳ ಹೂಳೆತ್ತಲು ಕೋರಲಾಯಿತು. | Assistant Engineer-BWSSB |
| 2 | 6ನೇ ಬಿ ಅಡ್ಡರಸ್ತೆ ಕಗ್ಗದಾಸಪುರ ಇಲ್ಲಿ WWM ವತಿಯಿಂದ ಕೈಗೊಳ್ಳಲಾಗುತ್ತಿರುವ ಕಾಮಗಾರಿಯನ್ನು ಶೀಘ್ರವಾಗಿ ಕೈಗೊಂಡು ಪೂರ್ಣಗೊಳಿಸಲು ಕೋರಲಾಯಿತು. | Assistant Engineer-BWSSB |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

**ಕಾರ್ಯದರ್ಶಿಗಳು**
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ:57-ಸಿ.ವಿ.ರಾಮನ್‌ನಗರ

**ಅಧ್ಯಕ್ಷರು**
ಪ್ರಭಾರ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಹಾಗೂ ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:57-ಸಿ.ವಿ.ರಾಮನ್‌ನಗರ

Scanned with CamScanner